ಇದರ ಬಗ್ಗೆ ಇನ್ನೂ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೂರಲ್ ಕಮ್ಯೂನಿಕೇಷನ್‌ಗಾಗಿ ನಿರ್ಮಿಸುವ ರಸ್ತೆಗೆ ನಾವು ಜಮೀನನ್ನು ಆಕ್ಟ್ಸರ್ ಮಾಡಿಕೊಳ್ಳುವುದಿಲ್ಲ. ಏಕೆಂದರೆ ಆಯಾ ಗ್ರಾಮದ ರೈತರುಗಳೇ ಮುಂದೆ ಬಂದು ಜಮೀನನ್ನು ಬಿಟ್ಟುಕೊಡತಕ್ಕಂತಹ ಹಿನ್ನೆಲೆಯಲ್ಲಿ ರಸ್ತೆಯನ್ನು ಮಾಡತಕ್ಕಂತಹ ಪರಿಪಾಠ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದಕ್ಕಾಗಿ ಇವತ್ತು ಎಲ್ಲ ಕಡೆ ಪರಿಹಾರವನ್ನು ಕೊಡುವುದಕ್ಕಾಗುವುದಿಲ್ಲ. ಈ ರೀತಿಯ ಪರಿಹಾರವನ್ನು ಕೊಡಬೇಕೆಂದು ಹೋದರೆ ಇದಕ್ಕಾಗಿ ತುಂಬ ಹಣ ಬೇಕಾಗುತ್ತದೆ. ಆದರೂ ಪರಿಹಾರವನ್ನು ಕೊಟ್ಟಿರತಕ್ಕಂತಹದ್ದು ಬಹಳ ಕಡಿಮೆ. ರಸ್ತೆಯ ಅವಶ್ಯಕತೆ ಇದೆ ಅಂತ ತಿಳಿದು ರಸ್ತೆಯನ್ನು ಮಾಡುವಾಗ ಯಾರು ಸ್ಥಳೀಯ ಜನ ಮುಂದೆ ಬಂದು ರಸ್ತೆಗೋಸ್ಕರವಾಗಿ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ. ಅಂಥವರಿಗೆ ಪರಿಹಾರವನ್ನು ಕೊಡತಕ್ಕಂತಹದ್ದು ಸರ್ವೇ ಸಾಮಾನ್ಯವಾಗಿ ಇಲ್ಲ. ಕೆಲವು ಅನಿವಾರ್ಯ ಸನ್ನಿವೇಶಗಳಲ್ಲಿ ಮಾತ್ರ ಕೆಲವು ಕಡೆ ಕೊಟ್ಟಿರಬಹುದು. ಆ ಮಾಹಿತಿ ನನ್ನಲ್ಲಿ ಇಲ್ಲ. ಮಾನ್ಯ ಸದಸ್ಯರಿಗೆ ಆ ಮಾಹಿತಿ ಬೇಕಾಗಿದ್ದರೆ ಅದನ್ನು ಒದಗಿಸಿ ಕೊಡುತ್ತೇನೆ. ನಾನು ಹೇಳಿದೆ ೩೨.೯ ಕಿಲೋ ಮೀಟರ್ ರಸ್ತೆಯನ್ನು ನಿಮ್ಮ ಕ್ಷೇತ್ರದಲ್ಲಿ ತೆಗೆದು ಕೊಳ್ಳತಕ್ಕಂತಹ ವಿಚಾರದಲ್ಲಿ ಅಂದರೆ ಟಾರ್ ಮಾಡತಕ್ಕಂತಹದ್ದಕ್ಕೆ ೭.೧೦ ಲಕ್ಷ ಹಣವನ್ನು ಇಟ್ಟಿದ್ದೇವೆ. ಅದರಿಂದ ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಿಕೊಡುವುದಕ್ಕೆ ರಾಜ್ಯದ ಸಂಪನ್ಮೂಲದ ವ್ಯಾಪ್ತಿಯಲ್ಲಿ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಈ ಪರಿಹಾರದ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾಗಿ ಹೇಳಿದ್ದಾರೆ. ಇದಕ್ಕಿಂತ ಮುಂಚೆ ಸರ್ಕಾರ ಅಂತಹವುಗಳಿಗೆ ಪರಿಹಾರವನ್ನು ಕೊಡುತ್ತೇವೆಂದು ಅನೇಕ ಜಿಲ್ಲಾ ಕೆಲಸಗಳಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಕಾಗದಪತ್ರವೂ ಆಗಿದೆ ಕೊಟ್ಟಿದ್ದಾರೆ. ಆದ್ದರಿಂದ ಪರಿಹಾರವನ್ನು ಕೊಡುತ್ತೇವೆಂದು ಸರ್ಕಾರ ಹೇಳಿರುವಾಗ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಯಾವುದಾದರೊಂದು ಏರ್ಪಾಡನ್ನು ಮಾಡಬೇಕಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ರೂರಲ್ ಕಮ್ಯೂನಿಕೇಷನ್ ರೋಡುಗಳನ್ನು ಮಾಡುವ ಕಡೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದರೆ ಫ್ಲಡ್ ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ. ಕೆಲವು ಕಡೆ ಅಂತಹ ಒಂದು ಸನ್ನಿವೇಶ ಬಂದಾಗ ಇಂತಹ ಒಂದು ನಿರ್ಣಯವನ್ನು ಮಾಡಬೇಕಾಗಿ ಬರಬಹುದು. ವಿಲೇಜ್ ರೋಡ್ಸ್‌ಗಳನ್ನು ಮಾಡುವಾಗ ರೈತರು ಮುಂದೆ ಬರಬೇಕಾಗುತ್ತದೆ. ಕೇವಲ ೨೪ ಅಡಿಗಳನ್ನು ಮಾತ್ರ ನಾವು ತೆಗೆದುಕೊಳ್ಳುವುದು. ಎಲ್ಲ ಕಡೆ ಸಹಕರಿಸಿದ್ದಾರೆ. ಬಹುಶಃ ನಿಮ್ಮಲ್ಲಿ ಅಂತಹ ಯಾವುದಾದರೂ ಘಟನೆ ನಡೆದಿದೆಯೇ ಎಂಬುದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಅಫಜಲ್‌ಪುರ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳ ಕುರಿತು

೩೬೦ (೨೧೫) ಶ್ರೀ ಹನುಮಂತ ರಾವ್ ದೇಸಾಯಿ (ಅಫಜಲ್‌ಪುರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಖಾತೆಯ ಅಡಿಯಲ್ಲಿರುವ ರಸ್ತೆಯ ವಿಸ್ತೀರ್ಣವೆಷ್ಟು ?

ಆ) ಈ ರಸ್ತೆಗಳ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೩೫೭.೨೦ ಕಿ.ಮೀ.ಗಳು.

ಆ) ಈ ರಸ್ತೆಗಳ ಕೆಟ್ಟು ಹೋಗಿರುವ ಭಾಗಗಳನ್ನು ಈ ಸಾಲಿನ ವಿಶೇಷ ದುರಸ್ತಿತಿಗೆ ನಿಗದಿ ಪಡಿಸಿದ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ದುರಸ್ತಿ ಮಾಡಲಾಗುತ್ತಿದೆ. ಇನ್ನು ಉಳಿದ ಭಾಗಗಳ ಅಭಿವೃದ್ಧಿಯನ್ನು ಹಂತ ಹಂತವಾಗಿ ಆರ್ಥಿಕ ಪರಿಸ್ಥಿತಿಗನುಗುಣವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಇದರ ಬಗ್ಗೆ ಇನ್ನೂ ಸ್ವಲ್ಪ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ. ಇಲ್ಲಿ ೪.೧೦ ಕಿ.ಲೋ ಮೀಟರ್ ದೂರದ ರಸ್ತೆಯನ್ನು ಬ್ಲಾಕ್ ಟಾಪಿಂಗ್ ಮಾಡಬೇಕಾಗಿದೆ, ೩ ಕಿಲೋ ಮೀಟರ್ ದೂರದ ರಸ್ತೆಯನ್ನು ಮೆಟಲಿಂಗ್ ಮಾಡಬೇಕಾಗಿದೆ, ಎಂ.ಡಿ.ಆರ್. ೪ ಕಿಲೋಮೀಟರ್

ರಸ್ತೆಯನ್ನು ರೀಸರ್ಫೆಸಿಂಗ್ ಮಾಡಬೇಕಾಗಿದೆ. ಓ. ಡಿ. ಆರ್. ವಿಲೇಜ್ ರೋಡ್ಸ್ ೧೪ ಕಿಲೋ ಮೀಟರ್ ರೀಸರ್ಫೇಸಿಂಗ್ ಮತ್ತು ಒಂದು ಕಿಲೋಮೀಟರ್ ಆರ್. ರೋಡ್ಸ್ ಇಷ್ಟಕ್ಕೆ ಲಸಗಳನ್ನು ಈ ವರ್ಷವೇ ತೆಗೆದುಕೊಳ್ಳಬೇಕು ಎನ್ನುವ ಅಭಿಪ್ರಾಯವು ಇದೆ. ಇದಕ್ಕೆ ಬೇಕಾಗಿರತಕ್ಕ ಒಟ್ಟು ಹಣ ಸುಮಾರು ೧೭.೪ ಲಕ್ಷ ರೂಪಾಯಿಗಳು. ನಮಗೆ ಸ್ವಲ್ಪ ಸಂಪನ್ಮೂಲಗಳ ಕೊರತೆ ಇದ್ದುದರಿಂದ ನಾವು ಈ ಕೆಲಸಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಶ್ರೀ ಹನುಮಂತರಾವ್ ದೇಸಾಯಿ.—ಇಲ್ಲಿ ಶಿರವಾಳ–ದುಧನಿ, ದುಧನಿ–ಬೆಳವರಕಿ, ಗುಲಬರ್ಗ ಮತ್ತು ಚೌಡಾಪುರ ಈ ರೋಡುಗಳು ಕಳೆದ ೧೫–೨೦ ವರ್ಷಗಳಿಂದ ಪೂರ್ತಿಯಾಗಿಲ್ಲ. ಈ ರೋಡು ಗಳನ್ನು ತಾವು ಯಾವಾಗ ಕಂಪ್ಲೀಟ್ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಮೊದಲೇ ನಾನು ಹೇಳಿದ ಹಾಗೆ ಈ ಕೆಲಸಗಳಿಗೆ ನಾವು ಸುಮಾರು ೧೭.೪ ಲಕ್ಷ ರೂಪಾಯಿಗಳ ಗ್ಯಾರಂಟನ್ನು ಕೊಟ್ಟಿದ್ದೇವೆ. ಇದು ಎಸ್ಟಿಮೇಟ್ ಕಾಸ್ಟ್ ಅಲ್ಲ. ಆ ಭಾಗದ ರೋಡು ಕೆಟ್ಟು ಹೋಗಿದೆ ಎಂದು ಗೊತ್ತಾಗಿಯೇ ನಾವು ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಒದಗಿಸತಕ್ಕ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಹನುಮಂತರಾವ್ ದೇಸಾಯಿ.—ಭೀಮಾ ನದಿ ಮೇಲೆ ದಂಡೆಯ ಯೋಜನೆಯ ಬಗ್ಗೆ ನಾನು ಲಿಖಿತ ಉತ್ತರವನ್ನು ಕೇಳಿದ್ದೆನು. ಅದಕ್ಕೆ ಉತ್ತರ ಸಿಕ್ಕಲಿಲ್ಲ.

(ಉತ್ತರ ಇಲ್ಲ)

ಚಿಕ್ಕೋಡಿ ತಾಲ್ಲೂಕಿನಲ್ಲಿ ಏತಾ ನೀರಾವರಿ ಯೋಜನೆ

೩೬೧ (೨೧೭) ಶ್ರೀ ಪಿ. ಪಿ. ಹೆಗೆರೆ (ಚಿಕ್ಕೋಡಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಎಷ್ಟು ಮತ್ತು ಎಲ್ಲೆಲ್ಲಿ ಕೆರೆಗಳು, ಬಂದರುಗಳು, ಮತ್ತು ಏತಾ ನೀರಾವರಿ ಕೆಲಸಗಳನ್ನು ಪ್ರಸ್ತಾಪಿಸಲಾಗಿದೆ?

ಆ) ಈ ಕೆಲಸಗಳಲ್ಲಿ,

೧) ಎಷ್ಟು ಕೆಲಸಗಳಿಗೆ ಪ್ರತಿ ಯೋಜನೆಯಲ್ಲಿ ಅಂದಾಜು ಪಟ್ಟಿ ಮತ್ತು ನಕ್ಷೆಗಳು ಪೂರ್ಣಗೊಂಡಿದೆ?

೨) ಎಷ್ಟಕ್ಕೆ ಅಂದಾಜು ಮತ್ತು ನಕ್ಷೆಗಳು ಇನ್ನೂ ತಯಾರಾಗಬೇಕಾಗಿದೆ?

ಇ) ಎಷ್ಟು ಕೆಲಸಗಳು ತನಿಖೆಯಲ್ಲಿವೆ?

ಈ) ಎಷ್ಟು ಕೆಲಸಗಳು ೧೯೮೩–೮೪ನೇ ಸಾಲಿನಲ್ಲಿ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ?

ಶ್ರೀ ಆರ್.ಎನ್. ಲಕ್ಷ್ಮೀಪತಿ. (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ೪ ಕೆಲಸಗಳು ೧೯೮೩–೮೪ರ ಆಯವ್ಯಯದಲ್ಲಿ ಸೇರಿದೆ ಮತ್ತು ೩೦ ಕೆಲಸಗಳಿಗೆ ತನಿಖೆಯು ಆಲೋಚನೆಯಲ್ಲಿದೆ. (ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)

ಆ) ೧) ಎರಡು ಕೆರೆಗಳ ಕೆಲಸಗಳು ಮತ್ತು ಎರಡು ಏತಾ ನೀರಾವರಿ ಕೆಲಸಗಳು.

೨) ೩೦ ಕೆಲಸಗಳಿಗೆ

ಇ) ೩೦

ಈ) ೪ ಕೆಲಸಗಳು (೧೯೮೩–೮೪ರ ಆಯವ್ಯಯದಲ್ಲಿ ಸೇರಿವೆ ಇದನ್ನು ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ).